ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: DTE-ADMIOEST(3)/15/2020
464

ಆಯುಕ್ತರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001
ದಿನಾಂಕ: 02.07.2024

## ಅಧಿಸೂಚನೆ

**ವಿಷಯ:** ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಮಾನವ ಸಂಪನ್ಮೂಲ ಏಜೆನ್ಸಿ ಮುಖಾಂತರ ಹೊರಗುತ್ತಿಗೆ ಮೇರೆಗೆ ಸಿಬ್ಬಂದಿಗಳ ಸೇವೆಯನ್ನು ಪಡೆಯುವ ಕುರಿತು.

**ಉಲ್ಲೇಖ:**
1. ಸರ್ಕಾರದ ಪತ್ರ ಸಂಖ್ಯೆ: ಇಡಿ 124 ಟಿಪಿಇ 2017, ದಿನಾಂಕ: 14.02.2018.
2. ಈ ಕಛೇರಿ ಕಾರ್ಯಾದೇಶ ಸಂಖ್ಯೆ: ಡಿಟಿಇ 42 ಇಎಸ್‌ಟಿ(3) 2017, ದಿ: 21.07.2018.
3. ಸರ್ಕಾರದ ಪತ್ರ ಸಂಖ್ಯೆ: ಇಡಿ 23 ಹೆಚ್.ಪಿ.ಟಿ. 2019. (ಭಾ) ದಿನಾಂಕ: 23.03.2020.
4. ಈ ಕಛೇರಿ ಅಧಿಸೂಚನೆ ಸಂಖ್ಯೆ: DTE-ADMIOEST(3)/42/2020, ದಿ: 21.01.2021
5. ಈ ಕಛೇರಿ ಜ್ಞಾಪನ ಸಂಖ್ಯೆ: ಡಿಟಿಇ 117 ಇಎಸ್‌ಟಿ(7) 2021, ದಿನಾಂಕ: 18.08.2021
6. ಈ ಕಛೇರಿ ಅಧಿಸೂಚನೆ ಸಂಖ್ಯೆ: DTE-ADMIOEST(3)/15/2020, ದಿ: 04.10.2021, ದಿ: 18.10.2021, ದಿ: 14.01.2022, ದಿ: 14.02.2022, ದಿ: 04.04.2022, ದಿ: 06.06.2022, ದಿ: 11.10.2022, ದಿ: 21.07.2023, ದಿ: 01.09.2023, ದಿ: 10.10.2023 ಮತ್ತು ದಿ 07.06.2024
7. ಈ ಕಛೇರಿ ಜ್ಞಾಪನ ಸಂಖ್ಯೆ: DTE-ADMIOEST(3)/15/2020, ದಿನಾಂಕ: 28.02.2024
8. ಸಮಿತಿಯ ವರದಿ ದಿನಾಂಕ: 30.05.2024 ರ ಮೇರೆಗೆ

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರ ಸರ್ಕಾರದ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಖಾಲಿಯಿರುವ ವಿವಿಧ ಗ್ರೂಪ್-ಡಿ ಹುದ್ದೆಗಳಿಗೆ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಹೊರ ಸಂಪನ್ಮೂಲ ಏಜೆನ್ಸಿ ಮೂಲಕ ಪಡೆಯಲು ಅನುಮೋದನೆ ನೀಡಲಾಗಿತ್ತು. ಈ ಸಂಬಂಧ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಕೇಂದ್ರ ಕಛೇರಿ ಮತ್ತು ಸಂಸ್ಥೆಗಳಲ್ಲಿ ಖಾಲಿಯಿದ್ದ ಗ್ರೂಪ್-ಡಿ (ಕಛೇರಿ ಹಾಗೂ ಕಾರ್ಯಗಾರ) ಹುದ್ದೆಗಳಿಗೆ ಎದುರಾಗಿ ಸಿಬ್ಬಂದಿಗಳ ಸೇವೆಯನ್ನು ಒದಗಿಸಲು ಟೆಂಡರ್ ಮೂಲಕ ಅರ್ಹತೆ ಪಡೆದು ಮೆ॥ ಆಬ್ಜೆಕ್ಟ್ ಟೆಕ್ನಾಲಜೀಸ್, ಬೆಂಗಳೂರು ಮತ್ತು ಮೆ॥ ಮಾತಾ ಟೆಕ್ನಾಲಜೀಸ್, ಧಾರವಾಡ ಏಜೆನ್ಸಿಯು ಅಂಗೀಕಾರಗೊಂಡಿದ್ದರಿಂದ, ಸದರಿ ಏಜೆನ್ಸಿಗಳಿಗೆ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಖಾಲಿಯಿರುವ ಗ್ರೂಪ್-ಡಿ ಹುದ್ದೆಗೆದುರಾಗಿ ಸಿಬ್ಬಂದಿಗಳ ಸೇವೆಯನ್ನು ಒದಗಿಸಲು ಉಲ್ಲೇಖ(2) ರನ್ವಯ ಕಾರ್ಯದೇಶ ನೀಡಲಾಗಿತ್ತು.

ಉಲ್ಲೇಖ(3) ರ ಸರ್ಕಾರದ ಪತ್ರದಲ್ಲಿ ಇಲಾಖೆಯಲ್ಲಿ ಖಾಲಿಯಿರುವ ಗ್ರೂಪ್-ಡಿ ಹುದ್ದೆಗಳ ಪೈಕಿ ಒಟ್ಟು 1173 ಹುದ್ದೆಗಳ ಮಿತಿಯೊಳಗೆ ಹೊರಗುತ್ತಿಗೆ ಮೇರೆಗೆ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಅನುಮತಿ ನೀಡಲಾಗಿತ್ತು. ಅದರಂತೆ ಸಂಸ್ಥೆಯ ವಿದ್ಯಾರ್ಥಿಗಳ ಸಂಖ್ಯೆಯ ಅನುಗುಣವಾಗಿ ಉಲ್ಲೇಖ(4) ರ ಅಧಿಸೂಚನೆಯಲ್ಲಿನ ಅನುಬಂಧ-1 ರಲ್ಲಿ ತಿಳಿಸಿರುವ ಸಂಖ್ಯೆಯ ಮಿತಿಯೊಳಗೆ ಸಂಸ್ಥೆಯಲ್ಲಿ ಖಾಲಿಯಿರುವ ಗ್ರೂಪ್-ಡಿ ಹುದ್ದೆಗಳ ಪೈಕಿ ಹೊರಗುತ್ತಿಗೆ ಮೇರೆಗೆ ಗ್ರೂಪ್-ಡಿ ಸಿಬ್ಬಂದಿಗಳಿಂದ ಸೇವೆ ಪಡೆಯಲು ಸೂಚಿಸಲಾಗಿತ್ತು ಹಾಗೂ ಉಲ್ಲೇಖ(5) ಮತ್ತು (6) ರಲ್ಲಿ ಸಂಸ್ಥೆಗಳ ಆಡಳಿತಾತ್ಮಕ ಹಿತದೃಷ್ಠಿಯಿಂದ ಹೊರಗುತ್ತಿಗೆ ಸಿಬ್ಬಂದಿಗಳ ಸಂಖ್ಯೆಯನ್ನು ಪರಿಷ್ಕರಿಸಲಾಗಿತ್ತು.

ಪ್ರಸ್ತುತ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಹೊಸದಾಗಿ ಸಂಸ್ಥೆಗಳು ಆರಂಭಗೊಂಡಿದ್ದು, ಸದರಿ ಸಂಸ್ಥೆಗಳ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಹಿತದೃಷ್ಠಿಯಿಂದ ಗ್ರೂಪ್-ಡಿ ಸಿಬ್ಬಂದಿಗಳ ಸೇವೆಯನ್ನು ಒದಗಿಸುವುದು ಅತ್ಯವಶ್ಯಕವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಉಲ್ಲೇಖ(4) ರಿಂದ (6) ರಲ್ಲಿ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಮೇರೆಗೆ ಗ್ರೂಪ್ -ಡಿ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಅನುಮತಿ ನೀಡಲಾದ ಸಂಖ್ಯೆಯನ್ನು ಪರಿಷ್ಕರಿಸಿ, ಇಲಾಖೆಯ ಎಲ್ಲಾ ಸಂಸ್ಥೆಗಳಿಗೆ ಮರು ಹಂಚಿಕೆ ಮಾಡಲು ಪರಿಶೀಲಿಸಿ ವರದಿ ಸಲ್ಲಿಸಲು ಜಂಟಿ ನಿರ್ದೇಶಕರು(ಆಡಳಿತ) ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಉಲ್ಲೇಖ(7) ರಲ್ಲಿ ರಚಿಸಲಾಗಿತ್ತು. ಉಲ್ಲೇಖ(8) ರಂತೆ ಇಲಾಖೆಯ ಅಧೀನದಲ್ಲಿ ಬರುವ ಕೇಂದ್ರ ಕಛೇರಿ ಮತ್ತು ಸಂಸ್ಥೆಗಳಲ್ಲಿ ಖಾಲಿಯಿರುವ ಗ್ರೂಪ್-ಡಿ ಹುದ್ದೆಗಳ ಪೈಕಿ ಸರ್ಕಾರವು ಹೊರಗುತ್ತಿಗೆ ಮೇರೆಗೆ ಗ್ರೂಪ್-ಡಿ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಅನುಮತಿ ನೀಡಲಾದ ಸಂಖ್ಯೆಯ ಮಿತಿಯೊಳಗೆ, ಇಲಾಖೆಯ ಕೇಂದ್ರ ಕಛೇರಿ ಮತ್ತು ಸಂಸ್ಥೆಗಳಿಗೆ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಮರು ಹಂಚಿಕೆ ಮಾಡಿ ಶಿಫಾರಸ್ಸು ಮಾಡಲಾಗಿರುತ್ತದೆ. ಈ ಸಂಬಂಧ ಸಮಿತಿಯ ಶಿಫಾರಸ್ಸನ್ನು ಪರಿಶೀಲಿಸಿ, ಈ ಅಧಿಸೂಚನೆಯಲ್ಲಿನ ಅನುಬಂಧ-1 (ಅಬ್ಜೆಕ್ಟ್ ಟೆಕ್ನಾಲಜೀಸ್, ಬೆಂಗಳೂರು) ಮತ್ತು ಅನುಬಂಧ-2(ಮಾತಾ ಟೆಕ್ನಾಲಜೀಸ್, ಧಾರವಾಡ) ರಲ್ಲಿ ತಿಳಿಸಿರುವ ಹುದ್ದೆಗಳ ಮಿತಿಯೊಳಗೆ ಕೆಳಕಂಡ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟು ಹೊರಗುತ್ತಿಗೆ ಮೇರೆಗೆ ಗ್ರೂಪ್-ಡಿ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಸೂಚಿಸಿದೆ ಹಾಗೂ ಸದರಿ ನಿಬಂಧನೆ ಮತ್ತು ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಿದೆ.

<u>ನಿಬಂಧನೆ ಮತ್ತು ಷರತ್ತುಗಳು:-</u>

1. ಇಲಾಖೆಯಿಂದ ಈಗಾಗಲೇ ಅನುಮತಿ ನೀಡಿರುವ ಹುದ್ದೆಗಳ ಸಂಖ್ಯೆ ಮಿತಿಗೆ ಒಳಪಟ್ಟು, ಒಂದು ವೇಳೆ ನೇರ ನೇಮಕಾತಿ / ಅನುಕಂಪ ಆಧಾರ ನೇಮಕಾತಿ / ವರ್ಗಾವಣೆ ಮೂಲಕ ಇಲಾಖಾ ನೌಕರರಿಂದ ಭರ್ತಿ ಮಾಡಿದರೆ ಅಂತಹ ಸ್ಥಾನಗಳನ್ನು ವರ್ಗಾವಣೆ / ನಿವೃತ್ತಿ / ಪದೋನ್ನತಿ ಮತ್ತು ಇನ್ನಿತರೆ ಕಾರಣಗಳಿಂದ ತೆರವಾಗುವ ಸ್ಥಾನಗಳಲ್ಲಿ ಆದ್ಯತೆ ಮೇರೆಗೆ ಸೇವೆಯನ್ನು ಈಗಾಗಲೇ ಗೊತ್ತುಪಡಿಸಿರುವ ಏಜೆನ್ಸಿಯಿಂದ ಹೊರಗುತ್ತಿಗೆ ಮೂಲಕ ಪಡೆಯಲು ಇಲಾಖೆಯಿಂದ ಅನುಮತಿ ಪಡೆಯುವುದು.
2. ಇಲಾಖೆಯ / ಸಂಸ್ಥೆಯ ಕೆಲಸದ ಸಮಯಕ್ಕೆ ಅನುಗುಣವಾಗಿ ಹಾಗೂ ತುರ್ತು ಸಂಧರ್ಭದಲ್ಲಿ ಹೆಚ್ಚಿನ ಸಮಯದ ಕೆಲಸದ ಅವಶ್ಯಕತೆ ಇದ್ದಲ್ಲಿ ಹಾಗೂ ಇಲಾಖೆಯ / ಸಂಸ್ಥೆಯ ಕೆಲಸಗಳಿಗೆ ಮಾತ್ರ ಹೊರಗುತ್ತಿಗೆ ಸಿಬ್ಬಂದಿ ಸೇವೆ ಪಡೆಯುವುದು.

3. ಈಗಾಗಲೇ ಇಲಾಖೆಯ ಜ್ಞಾಪನ ಸಂಖ್ಯೆ:DTE-ADMIOEST(3)/15/2020, ದಿನಾಂಕ: 25.06.2024 ರಲ್ಲಿ ತಿಳಿಸಿರುವಂತೆ, ಕಛೇರಿ / ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ / ಕಾರ್ಯನಿರ್ವಹಿಸುವ ಹೊರಗುತ್ತಿಗೆ ಸಿಬ್ಬಂದಿಗಳ ಹಾಜರಾತಿಯನ್ನು ಕಡ್ಡಾಯವಾಗಿ Aadhar Enabled Biometric Attendance System(AEBAS) ತಂತ್ರಾಂಶದ ಮೂಲಕ ನಿರ್ವಹಿಸುವುದು. ಒಂದು ವೇಳೆ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಹಾಜರಾತಿಯನ್ನು AEBAS ತಂತ್ರಾಂಶದಲ್ಲಿ ನಿರ್ವಹಿಸದಿದ್ದರೆ ಸದರಿ ಸಿಬ್ಬಂದಿಗಳ ವೇತನವನ್ನು ಪಾವತಿಸುವುದಿಲ್ಲ ಹಾಗೂ ಮುಂದಿನ ಆಗು ಹೋಗುಗಳಿಗೆ ಸಂಬಂಧಪಟ್ಟವರೇ ಜವಾಬ್ದಾರರಾಗಿರುತ್ತಾರೆ. AEBAS ತಂತ್ರಾಂಶದಲ್ಲಿ ದಾಖಲಾಗಿರುವ ಹಾಜರಾತಿಯ ಮಾಹಿತಿಯಂತೆ ಸಿಬ್ಬಂದಿಗಳ ವೇತನವನ್ನು ಪಾವತಿಸಲಾಗುವುದು.
4. ಹೊರಗುತ್ತಿಗೆ ಸಿಬ್ಬಂದಿಗಳಿಂದ ಸರ್ಕಾರದ ಸ್ವತ್ತುಗಳಿಗೆ ಹಾನಿ ಉಂಟಾದಲ್ಲಿ ನಷ್ಟಭರಿಸಿಕೊಡಲು ಹೊರಗುತ್ತಿಗೆ ಸಂಸ್ಥೆಗೆ ಸೂಚಿಸುವುದು.
5. ಹೊರಗುತ್ತಿಗೆ ಸಿಬ್ಬಂದಿಗಳ ಸೇವೆ ತೃಪ್ತಿಕರವಾಗಿರದಿದ್ದಲ್ಲಿ ಅಥವಾ ಸಂಸ್ಥೆಯ ಷರತ್ತುಗಳ ಉಲ್ಲಂಘನೆ ಆಗಿದ್ದಲ್ಲಿ ಅಂತಹ ಸಿಬ್ಬಂದಿಯನ್ನು ಸೇವೆಯಿಂದ ವಜಾಗೊಳಿಸಲು ತಿಳಿಸಿ ಹಾಗೂ ಅಂತಹ ಸ್ಥಳದಲ್ಲಿ ಇನ್ನೋರ್ವ ಸಿಬ್ಬಂದಿಯನ್ನು ನಿಯೋಜಿಸುವಂತೆ ವರದಿಯನ್ನು ಸಂಬಂಧಪಟ್ಟ ಸಂಸ್ಥೆಗೆ ಸಲ್ಲಿಸುವುದು.
6. ಟೆಂಡರ್‌ದಾರರು ನೇಮಿಸುವ ಸಿಬ್ಬಂದಿಗಳು ಯಾವುದೇ ಅಪರಾಧ, ಧೂಮಪಾನ ಹಾಗೂ ಇತರೆ ಯಾವುದೇ ಕಾನೂನು ಬಾಹಿರ ಹಿನ್ನಲೆ ಹೊಂದಿರುವ ಬಗ್ಗೆ ಗಮನಕ್ಕೆ ಬಂದಲ್ಲಿ ತಕ್ಷಣ ಅಂತಹ ಸಿಬ್ಬಂದಿಯನ್ನು ಕರ್ತವ್ಯದಿಂದ ಬಿಡುಗಡೆಗೊಳಿಸುವಂತೆ ಹೊರಗುತ್ತಿಗೆ ಸಂಸ್ಥೆಗೆ ತಿಳಿಸಿ ಸದರಿ ಹುದ್ದೆಗೆ ಇನ್ನೋರ್ವ ಬೇರೆ ಹೊರಗುತ್ತಿಗೆ ಸಿಬ್ಬಂದಿಯನ್ನು ನಿಯೋಜಿಸುವಂತೆ ತಿಳಿಸಿ ಕ್ರಮವಹಿಸುವುದು.
7. ಇಂಡಸ್ಟ್ರೀಯಲ್ ಡಿಸ್ಪೂಟ್ ಆಕ್ಟ್ 1947 ರಂತೆ ಹೊರಗುತ್ತಿಗೆ ನೌಕರರ ಸೇವೆಯನ್ನು ಪ್ರತಿ 240 ದಿನಗಳಿಗೆ / ಹನ್ನೊಂದು ತಿಂಗಳಿಗೆ ಸ್ಥಗಿತಗೊಳಿಸಿ ಸೇವೆಯಿಂದ ಕಡ್ಡಾಯವಾಗಿ ಬಿಡುಗಡೆ ಆಗುವಂತೆ ಹಾಗೂ ಸದರಿ ಬಿಡುಗಡೆಗೊಳಿಸಿದ ಸಿಬ್ಬಂದಿ ಹುದ್ದೆಗೆ ಇನ್ನೋರ್ವ ಬೇರೆ ಹೊರಗುತ್ತಿಗೆ ಸಿಬ್ಬಂದಿಯನ್ನು ತಕ್ಷಣ ನೇಮಕಾತಿ ಮಾಡುವಂತೆ ಹೊರಗುತ್ತಿಗೆ ಸಂಸ್ಥೆಗೆ ತಿಳಿಸಿ ಕ್ರಮವಹಿಸುವುದು.
8. ಹೊರಗುತ್ತಿಗೆ ಆಧಾರದ ಮೇಲೆ ನಿಯೋಜಿಸಿರುವ ಸಿಬ್ಬಂದಿಗಳು ಟೆಂಡರ್‌ದಾರ ಸಂಸ್ಥೆಯ ಸಿಬ್ಬಂದಿಗಳಾಗಿರುತ್ತಾರೆಯೇ ಹೊರತು ಸರ್ಕಾರದ ನೌಕರರಾಗಿರುವುದಿಲ್ಲ. ಅವರು ಸರ್ಕಾರದ ಯಾವುದೇ ಸೌಲಭ್ಯಗಳಿಗೆ ಅರ್ಹರಿರುವುದಿಲ್ಲ. ಆದ್ದರಿಂದ ಯಾವುದೇ ಸಿಬ್ಬಂದಿಗಳಿಗೆ ಅಧಿಕಾರಿಗಳು / ಸಿಬ್ಬಂದಿಗಳು ಸರ್ಕಾರದ ಸೌಲಭ್ಯಗಳನ್ನು ನೀಡುವ ಬಗ್ಗೆ ಆಶ್ವಾಸನೆ ನೀಡಿದಲ್ಲಿ ಶಿಸ್ತಿನ ಕ್ರಮಕ್ಕೆ ಒಳಪಡಿಸಲಾಗುವುದು.
9. ಟೆಂಡರ್‌ದಾರರು ನಿಯೋಜಿಸುವ ಯಾವುದೇ ಸಿಬ್ಬಂದಿಯವರು ಸೇವೆಗೆ ದೀರ್ಘಾವಧಿ ರಜೆ ಪಡೆದಲ್ಲಿ / ಅನಧಿಕೃತ ಗೈರುಹಾಜರು ಆದಲ್ಲಿ / ಸೇವೆಯನ್ನು ತೃಪ್ತಿಕರವಾಗಿ ನೀಡದಿದ್ದಲ್ಲಿ / ಇಲಾಖೆಯ ಅಧಿಕಾರಗಳೊಂದಿಗೆ ಅನುಚಿತವಾಗಿ / ಇಲಾಖೆಯ ನಿಯಮಾವಳಿಗೆ ವಿರುದ್ಧವಾಗಿ ವರ್ತಿಸಿದ್ದಲ್ಲಿ / ಸೇವೆ ಒದಗಿಸುವ ಸಂಸ್ಥೆಯ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಕೂಡಲೇ ಅಂತಹ ಸಿಬ್ಬಂದಿಯನ್ನು ವಜಾಗೊಳಿಸುವುದು, ಸದರಿ ಸ್ಥಳದಲ್ಲಿ ಮತ್ತೊಬ್ಬ ಬದಲಾಯಿತ ಸಿಬ್ಬಂದಿಯನ್ನು ನಿಯೋಜಿಸುವ ಅಧಿಕಾರ /

...4/-

ಜವಾಬ್ದಾರಿ ಟೆಂಡರ್‌ದಾರದ್ದಾಗಿರುತ್ತದೆ. ಟೆಂಡರ್‌ದಾರರಿಂದ ನೇಮಕಾತಿ ಮಾಡಿಕೊಳ್ಳುವ / ವಜಾಗೊಳಿಸಲ್ಪಡುವ / ಸಿಬ್ಬಂದಿಯ ನೇಮಕಾತಿ ನವೀಕರಣದ ವಿಷಯದಲ್ಲಿ ಇಲಾಖೆಯ ಅಧಿಕಾರಿಗಳ/ಸಿಬ್ಬಂದಿಗಳ ಹಸ್ತಕ್ಷೇಪ ಇರುವಂತಿಲ್ಲ ಒಂದು ವೇಳೆ ಸದರಿ ವಿಷಯಲ್ಲಿ ಇಲಾಖೆಯ ಅಧೀಕಾರಿ / ಸಿಬ್ಬಂದಿಗಳು ಹಸ್ತಕ್ಷೇಪ ಮಾಡಿದಲ್ಲಿ ಶಿಸ್ತುಕ್ರಮಕ್ಕೆ ಒಳಪಡಿಸಲಾಗುವುದು ಮತ್ತು ಟೆಂಡರ್‌ದಾರರು ನಿಯೋಜಿಸುವ ಯಾವುದೇ ಸಿಬ್ಬಂದಿಯ ಸಂಬಂಧವು ಸೇವೆಗೆ ಮಾತ್ರ ಸೀಮಿತವಾಗಿರುತ್ತದೆ.

10. ಟೆಂಡರುದಾರರು ನಿಯೋಜಿಸುವ ಸಿಬ್ಬಂದಿಗೆ, ಕನ್ನಡವನ್ನು ಓದಲು, ಬರೆಯಲು ಮತ್ತು ಮಾತನಾಡಲು ಬರುತ್ತದೆಯೇ ಎಂಬುದನ್ನು ಖಚಿತಪಡಿಸಿಕಳ್ಳತಕ್ಕದ್ದು.

11. **ಇಲಾಖೆಯಿಂದ ಅಧಿಕಾರಿಗಳು ಆಯಾ ಸಂಸ್ಥೆಗಳಿಗೆ ಬೇಟಿ ನೀಡಿದ ಸಂದರ್ಭದಲ್ಲಿ ಹೊರಗುತ್ತಿಗೆ ಸಿಬ್ಬಂದಿಗಳ ಹಾಜರಾತಿ ಪುಸ್ತಕದಲ್ಲಿ ನಮೂದಿಸಿರುವ ಸಂಖ್ಯೆಗಳಿಗಷ್ಟೇ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರಬೇಕು. ಇಲ್ಲವಾದಲ್ಲಿ ಸಂಸ್ಥೆಯ ಮುಖ್ಯಸ್ಥರನ್ನು ನೇರ ಹೊಣೆಗಾರರನ್ನಾಗಿಸಿ ನಿಯಮಾನುಸಾರ ಶಿಸ್ತಿನ ಕ್ರಮಕ್ಕೆ ಒಳಪಡಿಸಲಾಗುವುದು.**

12. ಯಾವುದೇ ನಿಬಂಧನೆ ಮತ್ತು ಷರತ್ತುಗಳನ್ನು ಉಲ್ಲಂಘಿಸಿದಲ್ಲಿ, ಇಲಾಖೆಗೆ ಆಡಳಿತಾತ್ಮಕವಾಗಿ ತೊಂದರೆ ಉಂಟಾದಲ್ಲಿ ಸಂಬಂಧಪಟ್ಟ ಸಂಸ್ಥೆಯ ಮುಖ್ಯಸ್ಥರನ್ನು ನೇರ ಹೊಣೆಗಾರರನ್ನಾಗಿಸಿ ನಿಯಮಾನುಸಾರ ಶಿಸ್ತಿನ ಕ್ರಮಕ್ಕೆ ಒಳಪಡಿಸಲಾಗುವುದು.

**"ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"**

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

**ಇವರಿಗೆ (ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ)**:

1. ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ / ಸರ್ಕಾರಿ ಪಾಲಿಟೆಕ್ನಿಕ್ / ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರಿಗೆ;
2. ಆಡಳಿತಾಧಿಕಾರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
3. ಮೆ|| ಮಾತಾ ಟೆಕ್ನಾಲಜೀಸ್, ಧಾರವಾಡ;
4. ಮೆ|| ಆಬ್ಜೆಕ್ಟ್ ಟೆಕ್ನಾಲಜೀಸ್, ಬೆಂಗಳೂರು;
5. ನೋಡಲ್ ಅಧಿಕಾರಿ, ಇ-ಆಡಳಿತ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.

ಪ್ರತಿ ಮಾಹಿತಿಗಾಗಿ:-

1. ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಆಪ್ತ ಶಾಖೆ, ನಿರ್ದೇಶಕರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.

ದಿನಾಂಕ: 02.07.2024 ರ ಅಧಿಸೂಚನೆ ಸಂಖ್ಯೆ: DTE-ADMI0EST(3)/15/2020 ಕ್ಕೆ ಅನುಬಂಧ-1

(ಆಬ್ಜೆಕ್ಟ್ ಟೆಕ್ನಾಲಜೀಸ್, ಬೆಂಗಳೂರು)

| ಕ್ರ. ಸಂ. | ಸಂಸ್ಥೆಯ ಸಂಕೇತ | ಸಂಸ್ಥೆಯ ಹೆಸರು | ಪ್ರಸ್ತುತ ಹೊರಗುತ್ತಿಗೆ ಮೇರೆಗೆ ಸೇವೆ ಪಡೆಯಬೇಕಾದ ಸಂಖ್ಯೆ |
|---|---|---|---|
| | | **ಆಯುಕ್ತರ ಕಛೇರಿ** | |
| 1 | 100 | ಆಯುಕ್ತರ ಕಚೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | 20 |
| | | **ಸರ್ಕಾರಿ ಪಾಲಿಟೆಕ್ನಿಕ್** | |
| 2. | 101 | ಸರ್ಕಾರಿ ಜವಳಿ ತಂತ್ರಜ್ಞಾನ ಸಂಸ್ಥೆ, ಬೆಂಗಳೂರು | 2 |
| 3. | 102 | ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು | 16 |
| 4. | 103 | ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು | 15 |
| 5. | 105 | ಶ್ರೀಮತಿ ಎಲ್.ವಿ. ಸರ್ಕಾರಿ ಪಾಲಿಟೆಕ್ನಿಕ್,ಹಾಸನ | 11 |
| 6. | 107 | ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ | 12 |
| 7. | 109 | ಸರ್ಕಾರಿ ಪಾಲಿಟೆಕ್ನಿಕ್, ಕಲಬುರಗಿ | 11 |
| 8. | 110 | ಡಿ.ಎ.ಸಿ.ಜಿ. ಸರ್ಕಾರಿ ಪಾಲಿಟೆಕ್ನಿಕ್, ಚಿಕ್ಕಮಗಳೂರು | 12 |
| 9. | 112 | ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು | 11 |
| 10. | 113 | ಸರ್ಕಾರಿ ಪಾಲಿಟೆಕ್ನಿಕ್, ಬೆಳಗಾವಿ | 11 |
| 11. | 116 | ಸರ್ಕಾರಿ ಪಾಲಿಟೆಕ್ನಿಕ್, ಕೆ.ಆರ್.ಪೇಟೆ | 10 |
| 12. | 117 | ಸರ್ಕಾರಿ ಪಾಲಿಟೆಕ್ನಿಕ್, ರಾಯಚೂರು | 10 |
| 13. | 119 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು | 11 |
| 14. | 123 | ಜಿ.ಆರ್.ಐ.ಸಿ.ಪಿ. ಸಂಸ್ಥೆ, ಬೆಂಗಳೂರು | 4 |
| 15. | 124 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮಂಗಳೂರು | 10 |
| 16. | 125 | ಎಸ್.ಜೆ. ಸರ್ಕಾರಿ (ಸಂಜೆ) ಪಾಲಿಟೆಕ್ನಿಕ್, ಬೆಂಗಳೂರು | 2 |
| 17. | 126 | ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆ, ಬೆಂಗಳೂರು | 4 |
| 18. | 132 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹಾಸನ | 10 |
| 19. | 136 | ಸರ್ಕಾರಿ ಪಾಲಿಟೆಕ್ನಿಕ್, ಬಾಗೇಪಲ್ಲಿ | 9 |
| 20. | 141 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಲಬುರಗಿ | 9 |
| 21. | 144 | ಸರ್ಕಾರಿ ಪಾಲಿಟೆಕ್ನಿಕ್, ಕಾರ್ಕಳ | 9 |

...2/-

| | | | |
|---|---|---|---|
| 22. | 145 | ಸರ್ಕಾರಿ ಪಾಲಿಟೆಕ್ನಿಕ್, ಉಡುಪಿ | 9 |
| 23. | 146 | ಸರ್ಕಾರಿ ಪಾಲಿಟೆಕ್ನಿಕ್, ಲಿಂಗಸುಗೂರು | 9 |
| 24. | 147 | ಸರ್ಕಾರಿ ಪಾಲಿಟೆಕ್ನಿಕ್, ಗದಗ | 9 |
| 25. | 148 | ಸರ್ಕಾರಿ ಪಾಲಿಟೆಕ್ನಿಕ್, ಗಜೇಂದ್ರಗಡ | 9 |
| 26. | 149 | ಸರ್ಕಾರಿ ಪಾಲಿಟೆಕ್ನಿಕ್, ಚಿತ್ರದುರ್ಗ | 9 |
| 27. | 150 | ಸರ್ಕಾರಿ ಪಾಲಿಟೆಕ್ನಿಕ್, ಹಾನಗಲ್ | 9 |
| 28. | 151 | ಸರ್ಕಾರಿ ಪಾಲಿಟೆಕ್ನಿಕ್, ಬೀಳಗಿ | 9 |
| 29. | 152 | ಸರ್ಕಾರಿ ಪಾಲಿಟೆಕ್ನಿಕ್, ಬಾಗಲಕೋಟೆ | 9 |
| 30. | 153 | ಸರ್ಕಾರಿ ಪಾಲಿಟೆಕ್ನಿಕ್, ಬೇಲೂರು | 9 |
| 31. | 154 | ಸರ್ಕಾರಿ ಪಾಲಿಟೆಕ್ನಿಕ್, ಹೊಳೆನರಸೀಪುರ | 10 |
| 32. | 155 | ಸರ್ಕಾರಿ ಪಾಲಿಟೆಕ್ನಿಕ್, ತುರುವೇಕೆರೆ | 9 |
| 33. | 157 | ಸರ್ಕಾರಿ ಪಾಲಿಟೆಕ್ನಿಕ್, ಅರಕೆರೆ, ಶ್ರೀರಂಗಪಟ್ಟಣ | 10 |
| 34. | 158 | ಸರ್ಕಾರಿ ಪಾಲಿಟೆಕ್ನಿಕ್, ನಾಗಮಂಗಲ | 10 |
| 35. | 161 | ಸರ್ಕಾರಿ ಪಾಲಿಟೆಕ್ನಿಕ್, ಅಫಜಲಪುರ | 9 |
| 36. | 163 | ಸರ್ಕಾರಿ ಪಾಲಿಟೆಕ್ನಿಕ್, ಬಂಟ್ವಾಳ | 9 |
| 37. | 164 | ಸರ್ಕಾರಿ ಪಾಲಿಟೆಕ್ನಿಕ್, ಮುಧೋಳ | 9 |
| 38. | 166 | ಸರ್ಕಾರಿ ಪಾಲಿಟೆಕ್ನಿಕ್, ಕಾಳಗಿ | 10 |
| 39. | 168 | ಸರ್ಕಾರಿ ಪಾಲಿಟೆಕ್ನಿಕ್, ಹೊಸದುರ್ಗ | 9 |
| 40. | 175 | ಸರ್ಕಾರಿ ಪಾಲಿಟೆಕ್ನಿಕ್, ಇಮ್ಮಡಿಹಳ್ಳಿ | 9 |
| 41. | 178 | ಸರ್ಕಾರಿ ಪಾಲಿಟೆಕ್ನಿಕ್, ರಬಕವಿ-ಬನಹಟ್ಟಿ | 9 |
| 42. | 179 | ಸರ್ಕಾರಿ ಪಾಲಿಟೆಕ್ನಿಕ್, ಅಥಣಿ | 9 |
| 43. | 182 | ಸರ್ಕಾರಿ ಪಾಲಿಟೆಕ್ನಿಕ್, ಹಿರಿಯೂರು | 10 |
| 44. | 183 | ಸರ್ಕಾರಿ ಪಾಲಿಟೆಕ್ನಿಕ್, ಚನ್ನಸಂದ್ರ | 9 |
| 45. | 184 | ಸರ್ಕಾರಿ ಪಾಲಿಟೆಕ್ನಿಕ್, ದೇವದುರ್ಗ | 8 |
| 46. | 185 | ಶ್ರೀ ಚನ್ನಕೇಶವ ಸರ್ಕಾರಿ ಪಾಲಿಟೆಕ್ನಿಕ್, ಗುಡ್ಡದ ಚನ್ನಾಪುರ, ಬಂಕಾಪುರ | 9 |

...3/-

| | | | |
|---|---|---|---|
| 47. | 187 | ಸರ್ಕಾರಿ ಪಾಲಿಟೆಕ್ನಿಕ್, ಶಿರಾ | 10 |
| 48. | 188 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹೊಳೆನರಸೀಪುರ | 11 |
| 49. | 189 | ಸರ್ಕಾರಿ ಪಾಲಿಟೆಕ್ನಿಕ್, ಮೊಸಳೆಹೊಸಳ್ಳಿ | 11 |
| 50. | 191 | ಸರ್ಕಾರಿ ಪಾಲಿಟೆಕ್ನಿಕ್, ಗೌರಿಬಿದನೂರು | 7 |
| 51. | 192 | ಸರ್ಕಾರಿ ಪಾಲಿಟೆಕ್ನಿಕ್, ಕಾಪು | 7 |
| 52. | 195 | ಸರ್ಕಾರಿ ಪಾಲಿಟೆಕ್ನಿಕ್, ಕೊಪ್ಪ | 7 |
| 53. | 197 | ಸರ್ಕಾರಿ ಪಾಲಿಟೆಕ್ನಿಕ್, ಕಡೂರು | 7 |
| 54. | 199 | ಸರ್ಕಾರಿ ಪಾಲಿಟೆಕ್ನಿಕ್, ಸದಲಗ | 6 |
| 55. | 200 | ಸರ್ಕಾರಿ ಪಾಲಿಟೆಕ್ನಿಕ್, ಮಳವಳ್ಳಿ | 6 |
| 56. | 709 | ಸರ್ಕಾರಿ ಪಾಲಿಟೆಕ್ನಿಕ್, ಚಿತ್ರಳ್ಳಿ | 6 |
| 57. | 711 | ಸರ್ಕಾರಿ ಪಾಲಿಟೆಕ್ನಿಕ್, ಅರಕೇರಾ, ರಾಯಚೂರು | 6 |
| 58. | 714 | ಸರ್ಕಾರಿ ಪಾಲಿಟೆಕ್ನಿಕ್, ಹೊಳೆಆಲೂರು | 6 |
| 59. | 715 | ಸರ್ಕಾರಿ ಪಾಲಿಟೆಕ್ನಿಕ್, ಮಸ್ಕಿ | 6 |
| 60. | 716 | ಸರ್ಕಾರಿ ಪಾಲಿಟೆಕ್ನಿಕ್, ತಿಪಟೂರು | 6 |
| 61. | 717 | ಸರ್ಕಾರಿ ಪಾಲಿಟೆಕ್ನಿಕ್,ತರೀಕೆರೆ | 6 |
| 62. | 718 | ಸರ್ಕಾರಿ ಪಾಲಿಟೆಕ್ನಿಕ್,ಬ್ಯಾಡಿಗಿ | 6 |
| **ಸರ್ಕಾರಿ ಇಂಜಿನಿಯರಿಂಗ್ ಕಾಲೇಜು** | | | |
| 63. | 200 | ಸರ್ಕಾರಿ ಎಸ್.ಕೆ.ಎಸ್.ಜೆ.ಟಿ. ಸಂಸ್ಥೆ, ಬೆಂಗಳೂರು | 12 |
| 64. | 204 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕೆ.ಆರ್.ಪೇಟೆ | 12 |
| 65. | 206 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾಸನ | 12 |
| 66. | 207 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾವೇರಿ | 12 |
| 67. | 210 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಯಚೂರು | 12 |
| 68. | 211 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಮೊಸಳೆಹೊಸಹಳ್ಳಿ | 12 |
| 69. | 213 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಗಂಗಾವತಿ | 11 |
| 70. | | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಚಳ್ಳಕೆರೆ | 9 |
| 71. | | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ನರಗುಂದ | 8 |

...4/-

| ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ | | | |
|---|---|---|---|
| 72. | 302 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ,ಮಂಗಳೂರು | 4 |
| 73. | 303 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಬಾಗಲಕೋಟೆ | 5 |
| 74. | 305 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಕಲಬುರಗಿ | 5 |

**"ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"**

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

## ದಿನಾಂಕ: 02.07.2024 ರ ಅಧಿಸೂಚನೆ ಸಂಖ್ಯೆ: DTE-ADMI0EST(3)/15/2020 ಕ್ಕೆ ಅನುಬಂಧ-2

### (ಮಾತಾ ಟೆಕ್ನಾಲಜೀಸ್, ಧಾರವಾಡ)

| ಕ್ರ. ಸಂ. | ಸಂಸ್ಥೆಯ ಸಂಕೇತ | ಸಂಸ್ಥೆಯ ಹೆಸರು | ಪ್ರಸ್ತುತ ಹೊರಗುತ್ತಿಗೆ ಮೇರೆಗೆ ಸೇವೆ ಪಡೆಯಬೇಕಾದ ಸಂಖ್ಯೆ |
|---|---|---|---|
| | | ಸರ್ಕಾರಿ ಪಾಲಿಟೆಕ್ನಿಕ್ | |
| 1. | 104 | ಸರ್ಕಾರಿ ಪಾಲಿಟೆಕ್ನಿಕ್, ಬಳ್ಳಾರಿ | 12 |
| 2. | 106 | ಡಿ.ಆರ್.ಆರ್. ಸರ್ಕಾರಿ ಪಾಲಿಟೆಕ್ನಿಕ್, ದಾವಣಗೆರೆ | 11 |
| 3. | 108 | ಸಿ.ಪಿ.ಸಿ. ಸರ್ಕಾರಿ ಪಾಲಿಟೆಕ್ನಿಕ್, ಮೈಸೂರು | 13 |
| 4. | 111 | ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ | 10 |
| 5. | 114 | ಸರ್ಕಾರಿ ಪಾಲಿಟೆಕ್ನಿಕ್, ಕಾರವಾರ | 11 |
| 6. | 115 | ಸರ್ಕಾರಿ ಪಾಲಿಟೆಕ್ನಿಕ್, ಬೀದರ್ | 11 |
| 7. | 118 | ಸರ್ಕಾರಿ ಪಾಲಿಟೆಕ್ನಿಕ್, ಕುಶಾಲನಗರ | 10 |
| 8. | 120 | ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರ | 11 |
| 9. | 121 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ | 10 |
| 10. | 128 | ವಿ.ಐ.ಎಸ್.ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ಭದ್ರಾವತಿ | 9 |
| 11. | 130 | ಸರ್ಕಾರಿ ಪಾಲಿಟೆಕ್ನಿಕ್, ಚಾಮರಾಜನಗರ | 10 |
| 12. | 131 | ಸರ್ಕಾರಿ ಗಣಿ ಶಿಕ್ಷಣ ಶಾಲೆ, ಕೆ.ಜಿ.ಎಫ್. | 8 |
| 13. | 135 | ಸರ್ಕಾರಿ ಮಹಿಳಾ ವಸತಿ ಪಾಲಿಟೆಕ್ನಿಕ್, ಶಿವಮೊಗ್ಗ | 9 |
| 14. | 137 | ಸರ್ಕಾರಿ ಪಾಲಿಟೆಕ್ನಿಕ್, ಕೊಪ್ಪಳ | 8 |
| 15. | 138 | ಸರ್ಕಾರಿ ಪಾಲಿಟೆಕ್ನಿಕ್, ಕುಷ್ಠಗಿ | 8 |
| 16. | 139 | ಸರ್ಕಾರಿ ಪಾಲಿಟೆಕ್ನಿಕ್, ಸೊರಬ | 9 |
| 17. | 140 | ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ, ಹೆಸರಘಟ್ಟ | 5 |
| 18. | 142 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ರಾಮನಗರ | 10 |
| 19. | 143 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಶಿರಾಳಕೊಪ್ಪ | 9 |
| 20. | 156 | ಸರ್ಕಾರಿ ಪಾಲಿಟೆಕ್ನಿಕ್, ಮುಳಬಾಗಿಲು | 9 |
| 21. | 159 | ಸರ್ಕಾರಿ ಪಾಲಿಟೆಕ್ನಿಕ್, ರಾಮನಗರ | 10 |
| 22. | 160 | ಸರ್ಕಾರಿ ಪಾಲಿಟೆಕ್ನಿಕ್, ಮಿರ್ಲೆ | 9 |
| 23. | 162 | ಸರ್ಕಾರಿ ಪಾಲಿಟೆಕ್ನಿಕ್, ಜೋಯಿಡಾ | 9 |
| 24. | 165 | ಸರ್ಕಾರಿ ಪಾಲಿಟೆಕ್ನಿಕ್, ಕಾರಟಗಿ | 8 |

...2/-

| | | | |
|---|---|---|---|
| 25. | 167 | ಸರ್ಕಾರಿ ಪಾಲಿಟೆಕ್ನಿಕ್, ಮುಂಡಗೋಡ | 9 |
| 26. | 169 | ಸರ್ಕಾರಿ ಪಾಲಿಟೆಕ್ನಿಕ್, ಕೆ.ಜಿ.ಎಫ್. | 10 |
| 27. | 170 | ಸರ್ಕಾರಿ ಪಾಲಿಟೆಕ್ನಿಕ್, ಹರಿಹರ | 10 |
| 28. | 171 | ಸರ್ಕಾರಿ ಪಾಲಿಟೆಕ್ನಿಕ್, ಹುಬ್ಬಳ್ಳಿ | 10 |
| 29. | 172 | ಸರ್ಕಾರಿ ಪಾಲಿಟೆಕ್ನಿಕ್, ಕಂಪ್ಲಿ | 9 |
| 30. | 173 | ಸರ್ಕಾರಿ ಪಾಲಿಟೆಕ್ನಿಕ್, ಹರಪನಹಳ್ಳಿ | 9 |
| 31. | 174 | ಸರ್ಕಾರಿ ಪಾಲಿಟೆಕ್ನಿಕ್, ಕೂಡ್ಲಿಗಿ | 9 |
| 32. | 176 | ಸರ್ಕಾರಿ ಪಾಲಿಟೆಕ್ನಿಕ್, ಝಳಕಿ | 8 |
| 33. | 177 | ಸರ್ಕಾರಿ ಪಾಲಿಟೆಕ್ನಿಕ್, ಸಿದ್ದಾಪುರ | 9 |
| 34. | 180 | ಸರ್ಕಾರಿ ಪಾಲಿಟೆಕ್ನಿಕ್, ಸುರಪುರ | 9 |
| 35. | 181 | ಸರ್ಕಾರಿ ಪಾಲಿಟೆಕ್ನಿಕ್, ಔರಾದ್ | 9 |
| 36. | 190 | ಸರ್ಕಾರಿ ಪಾಲಿಟೆಕ್ನಿಕ್, ಬಸವನಬಾಗೇವಾಡಿ | 7 |
| 37. | 193 | ಸರ್ಕಾರಿ ಪಾಲಿಟೆಕ್ನಿಕ್, ಚನ್ನಗಿರಿ | 7 |
| 38. | 194 | ಸರ್ಕಾರಿ ಪಾಲಿಟೆಕ್ನಿಕ್, ಹೊನ್ನಾಳಿ | 7 |
| 39. | 198 | ಸರ್ಕಾರಿ ಪಾಲಿಟೆಕ್ನಿಕ್, ಹಾರೋಹಳ್ಳಿ | 7 |
| 40. | 705 | ಸರ್ಕಾರಿ ಪಾಲಿಟೆಕ್ನಿಕ್, ಕೊಳ್ಳೆಗಾಲ | 6 |
| 41. | 706 | ಸರ್ಕಾರಿ ಪಾಲಿಟೆಕ್ನಿಕ್, ಹಳಿಯಾಳ | 6 |
| 42. | 707 | ಸರ್ಕಾರಿ ಪಾಲಿಟೆಕ್ನಿಕ್, ಗುನ್ನಾಳ | 6 |
| 43. | 708 | ಸರ್ಕಾರಿ ಪಾಲಿಟೆಕ್ನಿಕ್, ಹೂವಿನಹಡಗಲಿ | 7 |
| 44. | 710 | ಕೆಂಗಪ್ಪ ನಾಯಕ ಸರ್ಕಾರಿ ಪಾಲಿಟೆಕ್ನಿಕ್, ದಾಗಿನಕಟ್ಟೆ, ಬಸವಾಪಟ್ಟಣ | 6 |
| 45. | 712 | ಸರ್ಕಾರಿ ಪಾಲಿಟೆಕ್ನಿಕ್, ಪಿರಿಯಾಪಟ್ಟಣ | 6 |
| 46. | 713 | ಸರ್ಕಾರಿ ಪಾಲಿಟೆಕ್ನಿಕ್, ಕಮದೊಹಳ್ಳಿ | 6 |
| **ಸರ್ಕಾರಿ ಇಂಜಿನಿಯರಿಂಗ್ ಕಾಲೇಜು** | | | |
| 47. | 202 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಮನಗರ | 12 |
| 48. | 203 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಚಾಮರಾಜನಗರ | 12 |
| 49. | 205 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕುಶಾಲನಗರ | 12 |

| | | | |
|---|---|---|---|
| 50. | 208 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕಾರವಾರ | 12 |
| 51. | 209 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹೂವಿನಹಡಗಲಿ | 12 |
| 52. | 212 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ತಳಕಲ್ | 12 |
| 53. | | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಬೀದರ್ | 8 |
| **ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ** | | | |
| 54. | 301 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಭಧ್ರಾವತಿ | 5 |
| 55. | 304 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಹುಬ್ಬಳ್ಳಿ | 5 |
| 56. | 306 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಬಳ್ಳಾರಿ | 5 |

"ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು